ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸ್ಪೆಷಲ್ ಕೇಸ್ ನಂಬರ್ : 103/2015**

**ಪ್ರಾಸಾ- 9 ಚಾಸಾ- 34**

ಸಾಕ್ಷಿದಾರರ ಹೆಸರುಃ : ಪ್ರಕಾಶ್ ಜಿ ಟಿ ನಿಟ್ಟಲಿ

ತಂದೆಯ ಹೆಸರುಃ : ತಿಪ್ಪಣ್ಣ ನಿಟ್ಟಲ್

ವಯಸ್ಸುಃ : 56 ವರ್ಷ

ಉದ್ಯೋಗಃ : ಚೇರ್ಮನ್, ಕೆ ಎಸ್ ಇ ಎ ಬೋರ್ಡ್

ವಾಸ : ಬೆಂಗಳೂರು

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 02-08-2025:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ನಾನು ದಿನಾಂಕ 29-8-2013ರಿಂದ 7-4-2014ರವರೆಗೆ ಹಾಗೂ 31-5-14ರಿಂದ 14-9-2015ರವರೆಗೆ ಸರ್ಕಾರದ ಪೌರಾಡಳಿತ ನಿರ್ದೇಶನಾಲಯದಲ್ಲಿ ಜಂಟಿ ನಿರ್ದೇಶಕ(ಆಡಳಿತ) ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2.ಹಾಸನ ನಗರ ಸಭೆಯ ಸಹಾಯಕ ಕಾರ್ಯಪಾಲಕರಾಗಿದ್ದ ಆನಂದ್ ರವರಿಗೆ ಸಂಬಂಧಪಟ್ಟ 1999ರಿಂದ ಅವರ ವೇತನ ಬಟವಾಡೆ ದಾಖಲೆಯನ್ನು ನೀಡುವಂತೆ ಹಾಸನ ಲೋಕಾಯುಕ್ತ ಕಛೇರಿಯಿಂದ ಮನವಿ ಬಂದಿತ್ತು. ಅದರಂತೆ ಸಂಬಂಧಪಟ್ಟ ದಾಖಲೆಗಳನ್ನು ಹಾಸನ ಲೋಕಾಯುಕ್ತ ಕಛೇರಿಗೆ ಸಲ್ಲಿಸುವಂತೆ ಹಾಸನ ನಗರಸಭೆಯ ಪೌರಾಡಳಿತದವರಿಗೆ ಪತ್ರ ಬರೆದಿರುತ್ತೇನೆ. ನಂತರ ನಮ್ಮಲ್ಲಿ ಲಭ್ಯವಿದ್ದ ದಾಖಲೆಗಳ ಫೋಟೋಪ್ರತಿಯನ್ನು 14-2-2014ರ ನಿಪಿ-63ರ ಪತ್ರದೊಂದಿಗೆ ಕಳುಹಿಸಿರುತ್ತೇನೆ. ಅದರಲ್ಲಿ ನನ್ನ ರುಜು ಇದ್ದು ನಿಪಿ-63(ಎ)

ಎಂದು ಗುರುತಿಸಲಾಯಿತು. ಈ ಪತ್ರದೊಂದಿಗೆ ದಿನಾಂಕ 31-3-2007ರಿಂದ 31-3-2010 ಮತ್ತು 31-3-2013ರ ನಮೂನೆ 2ರ ಫೋಟೋಪ್ರತಿಗಳು ಲಗತ್ತಾಗಿರುತ್ತವೆ.

3.ದಿನಾಂಕ 29-5-2014ರಂದು ಹಾಸನ ಲೋಕಾಯುಕ್ತ ಕಛೇರಿಯಿಂದ ಆರೋಪಿತರಿಗೆ ಸಂಬಂಧಪಟ್ಟ ಸೇವಾವಿವರಗಳನ್ನು ಕಳುಹಿಸಿಕೊಡುವಂತೆ ಮನವಿ ಬಂದಿತ್ತು. ಅದರಂತೆ ಸದರಿ ಸೇವಾ ವಿವರಗಳನ್ನು ದಿನಾಂಕ 26-6-2014ರ ಪತ್ರದೊಂದಿಗೆ ಕಳುಹಿಸಿರುತ್ತೇನೆ. ಸದರಿ ಪತ್ರವನ್ನು ಈಗ ನೋಡುತ್ತಿದ್ದು ಅದರಲ್ಲಿ ವರ್ಷ 2014 ರ ಬದಲಿಗೆ 2011 ಎಂದು ನಮೂದಾಗಿರುತ್ತದೆ. ಅದು ತಪ್ಪಾಗಿ ನಮೂದಾಗಿರುವುದು, 2014 ಎಂದು ಪರಿಗಣಿಸಬೇಕಾಗಿ ಕೋರುತ್ತೇನೆ. ಸದರಿ ಪತ್ರವನ್ನು ನಿಪಿ-64 ಎಂದು ಅದರ ಜೊತೆ ಲಗತ್ತಿಸಿದ ಸೇವಾ ವಿವರವನ್ನು ನೋಡುತ್ತಿದ್ದು ನಿಪಿ-65 ಎಂದು ಅದರಲ್ಲಿ ನನ್ನ ರುಜು ಇದ್ದು ನಿಪಿ-65(ಎ) ಎಂದು ಗುರುತಿಸಲಾಯಿತು.

ಪಾಟೀಸವಾಲುಃ ಆರೋಪಿ ಪರ ವಕೀ**ಲರಿಂದಃ**

ಇಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**